# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಮತ್ಸ್ಯಾಶ್ರಯ ಯೋಜನೆಯಡಿ ಮಂಜೂರಾದ ಮನೆಗಳಿಗೆ ಸಂಬಂಧಿಸಿದಂತೆ ಫಲಾನುಭವಿಗಳನ್ನು ಜಿಲ್ಲಾ ಮಟ್ಟದ ಅಧಿಕಾರಿಗಳು ಅನುಮೋದಿಸುವ ಬಗ್ಗೆ.

ಓದಲಾಗಿದೆ:- ಮೀನುಗಾರಿಕೆ ನಿರ್ದೇಶಕರ ಪತ್ರ ಸಂಖ್ಯೆ: DOFTECORAMK/60/2021, ದಿನಾಂಕ: 06-05-2021.

******

**ಪ್ರಸ್ತಾವನೆ:**

ಮೇಲೆ ಓದಲಾದ ನಿರ್ದೇಶಕರು, ಮೀನುಗಾರಿಕೆ ಇಲಾಖೆ ಇವರ ಪತ್ರದಲ್ಲಿ, ಮತ್ಸ್ಯಾಶ್ರಯ ಯೋಜನೆಯಡಿ ನಿರ್ವಸಿತ ಮೀನುಗಾರರ ಅರ್ಹ ಫಲಾನುಭವಿಗಳಿಗೆ ಹಲವು ವರ್ಷಗಳಿಂದ ಮತ್ಸ್ಯಾಶ್ರಯ ಯೋಜನೆಯಡಿ ಸ್ವಂತ ಖಾಲಿ ನಿವೇಶನ ಹೊಂದಿರುವ ಅಥವಾ ಗುಡಿಸಲು/ಶಿಥಿಲಗೊಂಡ ಮನೆಯಲ್ಲಿ ವಾಸಿಸುತ್ತಿರುವ ಮೀನುಗಾರರಿಗೆ ಅರ್ಹತೆ ಮೇರೆಗೆ ಆಯ್ಕೆ ಸಮಿತಿ ಮೂಲಕ ವಸತಿ ಸೌಕರ್ಯ ಒದಗಿಸಲಾಗುತ್ತಿದೆ.

ಆಯ್ಕೆ ಸಮಿತಿಯಲ್ಲಿ ಆಯಾ ವಿಧಾನಸಭಾ ಕ್ಷೇತ್ರದ ಶಾಸಕರು-ಅಧ್ಯಕ್ಷರು, ವಿಧಾನ ಪರಿಷತ್ ಸದಸ್ಯರು-ಸದಸ್ಯರು (ಅವರ ವ್ಯಾಪ್ತಿಯ ಅಪೇಕ್ಷಿಸಿದ ಯಾವುದಾದರೊಂದು ವಿಧಾನಸಭಾ ಕ್ಷೇತ್ರಕ್ಕೆ ಸೀಮಿತವಾದಂತೆ) ಮತ್ತು ಸಂಬಂಧಿಸಿದ ತಾಲ್ಲೂಕಿನ ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ-2) - ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ.

17/6/21

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮೀನುಗಾರರಿಗೆ ಅನುಕ್ರಮವಾಗಿ ಶೇ.17.15 ರಷ್ಟು ಹಾಗೂ ಶೇ. 6.95 ರಷ್ಟು ಮನೆಗಳನ್ನು ಮೀಸಲಿರಿಸಲಾಗಿದೆ. ಕನಿಷ್ಟ ಶೇ. 30 ರಷ್ಟು ಮನೆಗಳನ್ನು ಮೀನುಗಾರ ಮಹಿಳೆಯರಿಗೆ/ಗಂಡ-ಹೆಂಡತಿಗೆ ಜಂಟಿಯಾಗಿ ನೀಡಲು ನಿಗದಿಪಡಿಸಿದೆ. ವಸತಿ ಸೌಕರ್ಯವನ್ನು ಪಡೆಯಲು ಫಲಾನುಭವಿಯು ಸಲ್ಲಿಸಬೇಕಾಗಿರುವ ದಾಖಲಾತಿಗಳ ವಿವರ ಈ ಕೆಳಗಿನಂತೆ ಇರುತ್ತದೆ.

1. ವಸತಿಗಾಗಿ ನಿಗದಿಪಡಿಸಿದ ಅರ್ಜಿ
2. ಆದಾಯ ಪ್ರಮಾಣ ಪತ್ರ
3. ಜಾತಿ ಪ್ರಮಾಣ ಪತ್ರ
4. ವಸತಿಯಿಲ್ಲದಿರುವ ಬಗ್ಗೆ ದೃಢೀಕರಣ ಪತ್ರ
5. ಮೀನುಗಾರಿಕೆ ಕ್ಷೇತ್ರದಲ್ಲಿ ತೊಡಗಿರುವ ಬಗ್ಗೆ ದೃಢೀಕರಣ ಪತ್ರ
6. ಸ್ವಂತ ನಿವೇಶನದ ಹಕ್ಕು ದಾಖಲೆಗಳು(ನಮೂನೆ-11 ಖಾತಾ ಇತ್ಯಾದಿ)
7. ಈಗಿರುವ ನಿವೇಶನ/ಗುಡಿಸಲು/ಶಿಥಿಲಗೊಂಡ ಮನೆಯ ಫೋಟೋಗಳು